**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ.ಸುಧಾಮ್ ದಾಸ್, ಶ್ರೀ ಮಧು ಜಿ ಮಾದೇಗೌಡ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

155ನೇ(೬ ನಿ=72

(117)

**ವಿಷಯ:** ಈ ಸರ್ಕಾರ ರಚನೆ ಆದ್ದಾಗಿನಿಂದ ರಾಜ್ಯದಲ್ಲಿ ಜಲ ಸಂಪನ್ಮೂಲ (ಭಾರಿ ಮತ್ತು ಮಧ್ಯಮ ನೀರಾವರಿ) ಇಲಾಖೆ ವತಿಯಿಂದ ಯಾವ ಯಾವ ಯೋಜನೆಯನ್ನು ಮಂಜೂರು ಮಾಡಿ ಜಾರಿಗೊಳಿಸಲಾಗಿದೆ ಹಾಗೂ ಅವುಗಳಿಗೆ ನಿಗಧಿಪಡಿಸಿರುವ ಬಿಡುಗಡೆ ಮಾಡಿ ವೆಚ್ಚ ಮಾಡಿರುವ ಮೊತ್ತವೆಷ್ಟು ಮತ್ತು ಮುಂದಿನ ದಿನಗಳಲ್ಲಿ ರಾಜ್ಯದ ಅಭಿವೃದ್ಧಿಗಾಗಿ ಕೃಷಿ/ ಕುಡಿಯುವ/ ಕೈಗಾರಿಕೆ ಯೋಜನೆಗಳಿಗೆ ಅಗತ್ಯವಿರುವ ನೀರನ್ನು ಒದಗಿಸಲು ಯಾವ ಯಾವ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ ಹಾಗೂ ಅವುಗಳಿಗೆ ನಿಗಧಿಪಡಿಸಿರುವ ಅನುದಾನ & ಯೋಜನೆ ಪೂರ್ಣಗೊಳಿಸುವ ಕಾಲಾವಧಿಯ ವಿವರ ನೀಡುವುದು ಮತ್ತು ರಾಜ್ಯದ ಅನುಮೋದನೆಗೊಂಡಿರುವ/ಬಾಕಿ ಉಳಿದಿರುವ/ಕೈಗೊಳ್ಳಲು ಉದ್ದೇಶಿಸಿರುವ ಯೋಜನೆ ಮತ್ತು ಅವುಗಳಿಗೆ ಅಗತ್ಯವಿರುವ ಅನುದಾನದ ಕುರಿತು ಕೇಂದ್ರ ಸರ್ಕಾರ ಮತ್ತು ರಾಜ್ಯದ ಗಡಿಗಳಿಗೆ ಹೊಂದಿಕೊಂಡಂತಿರುವ ರಾಜ್ಯಗಳ ಸರ್ಕಾರದ ಪ್ರತಿನಿಧಿಗಳೊಂದಿಗೆ ಕ್ರಮ ವಹಿಸಿರುವ ಪೂರ್ಣವಿವರಗಳನ್ನು ನೀಡುವುದು.

*******

ಜಲಸಂಪನ್ಮೂಲ (ಭಾರಿ ಮತ್ತು ಮಧ್ಯಮ) ಇಲಾಖೆಯಡಿ ಬರುವ 4 ನಿಗಮಗಳಾದ ಕೃಷ್ಣಾ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ ಹಾಗೂ ವಿಶ್ವೇಶ್ವರಯ್ಯ ಜಲ ನಿಗಮಗಳಿಂದ 2023-24 ಹಾಗೂ 2024-25ನೇ ಸಾಲಿನಲ್ಲಿ ಈಗಾಗಲೇ ಕೈಗೊಂಡಿರುವ, ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳ ಪ್ರಸ್ತುತ ಹಂತ ಹಾಗೂ ಅವುಗಳಿಗೆ ನಿಗಧಿಪಡಿಸಿರುವ ಅನುದಾನ & ಯೋಜನೆ ಪೂರ್ಣಗೊಳಿಸುವ ಕಾಲಾವದಿಯ ನಿಗಮವಾರು ವಿವರಗಳು ಈ ಕೆಳಗಿನಂತಿವೆ:

**<u>ಕೃಷ್ಣಾ ಭಾಗ್ಯ ಜಲ ನಿಗಮ:</u>**

ಕೃಷ್ಣಾ ಭಾಗ್ಯ ಜಲ ನಿಗಮವು 2023-24 ಸಾಲಿನಲ್ಲಿ ಒಟ್ಟಾರೆ ರೂ.3995.39 ಕೋಟಿ ಮೊತ್ತದ 11 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ಪಡೆಯಲಾಗಿರುತ್ತದೆ. ಈ ಯೋಜನೆಗಳಿಂದ ಪ್ರಮುಖವಾಗಿ 1,09,349 ಹೆಕ್ಟೇರ್ ನೀರಾವರಿ ಸೃಜಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ನಿಗಮ ನಿರ್ದೇಶಕರ ಮಂಡಳಿಯ ಅನುಮೋದನೆಯೊಂದಿಗೆ 6 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ ಮತ್ತು ಉಳಿದ 5 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಸದರಿ ಕಾಮಗಾರಿಗಳಿಗೆ ಅಂದಾಜು ಮೊತ್ತವನ್ನು ನೀಡಲಾಗಿದ್ದು, ಇನ್ನೂ ವೆಚ್ಚ ಭರಿಸಿರುವುದಿಲ್ಲ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

2024-25ನೇ ಸಾಲಿನಲ್ಲಿ ಒಟ್ಟಾರೆ ರೂ.3498.37 ಕೋಟಿ ಮೊತ್ತದ 16 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ಪಡೆಯಲಾಗಿರುತ್ತದೆ. ಇದರಿಂದ ಪ್ರಮುಖವಾಗಿ 1,01,053 ಹೆಕ್ಟೇರ್ ಹೊಸ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಹಾಗೂ 38 ಕೆರಗಳನ್ನು ತುಂಬಿಸಿ ಕುಡಿಯುವ ನೀರು ಮತ್ತು ಅಂತರ್ಜಲ ವೃದ್ಧಿಸಲು ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವ ಯೋಜನೆಗಳನ್ನು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಅಂದಾಜು ಮೊತ್ತವನ್ನು ನೀಡಲಾಗಿದ್ದು, ಇನ್ನೂ ವೆಚ್ಚ ಭರಿಸಿರುವುದಿಲ್ಲ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ರಾಜ್ಯಕ್ಕೆ ಕುಡಿಯುವ ನೀರನ್ನು ಪೂರೈಸುವ ಸಲುವಾಗಿ ಕೃಷ್ಣಾ ಭಾಗ್ಯ ಜಲ ನಿಗಮ ವತಿಯಿಂದ ಯಾವುದೇ ಯೋಜನೆಗಳನ್ನು ಪ್ರಸ್ತಾಪಿಸಿರುವುದಿಲ್ಲ.

ಕೃಷ್ಣಾ ಭಾಗ್ಯ ಜಲ ನಿಗಮದಡಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1,2&3ರಲ್ಲಿ ಬರುವ ಉಪ ಯೋಜನೆಗಳ ಒಟ್ಟು 32 ನೀರಾವರಿ ಕಲ್ಪಿಸುವ ಯೋಜನೆಗಳನ್ನು (ಒಟ್ಟಾರೆ 14,24,602 ಹೆ) ಕೈಗೊಳ್ಳಲಾಗಿದ್ದು, ಈ ಪೈಕಿ 13 ನೀರಾವರಿ ಕಲ್ಪಿಸುವ ಯೋಜನೆಗಳು ಪೂರ್ಣಗೊಂಡಿದ್ದು, 6,56,050 ಹೆ ಅಚ್ಚುಕಟ್ಟು ಪ್ರದೇಶಗಳಿಗೆ ಈಗಾಗಲೇ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು ಮತ್ತು 1,86,366 ಹೇಕ್ಟರ್ ನೀರಾವರಿ ಸಾಮರ್ಥ ಸೃಜಿಸಲಾಗಿದ್ದು, ಉಳಿದ 5,82,186 ಹೆ ಅಚ್ಚುಕಟ್ಟು

ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು [illegible] ಹಂತ-1,2 & 3ರಲ್ಲಿ ಬರುವ ಬಾಕಿ ಉಪ ಯೋಜನೆಗಳ ಮತ್ತು ಇತರೇ ಯೋಜನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಪ್ರಸಕ್ತ ಸರ್ಕಾರದ 2023-24 ಮತ್ತು 2024-25ನೇ ಸಾಲಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಆರ್ಥಿಕ ವರ್ಷ | ನಿಗದಿಪಡಿಸಿರುವ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| 1 | 2023-24 | 5,062.61 | 4962.62 |
| 2 | 2024-25 | 4,830.05 | 3045.91 |

**<u>ಕರ್ನಾಟಕ ನೀರಾವರಿ ನಿಗಮ:</u>**

ಕರ್ನಾಟಕ ನೀರಾವರಿ ನಿಗಮದಡಿ 2024-25 ನೇ ಸಾಲಿನಲ್ಲಿ 14 ಯೋಜನೆಗಳ ರೂ. 1962.92 ಕೋಟಿ ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ. ಇದರಿಂದ ಪ್ರಮುಖವಾಗಿ 28,539 ಹೆ. ಹೊಸ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ (05 ಯೋಜನೆಗಳು-ಶ್ರೀ.ಚನ್ನವೃಶಬೇಂದ್ರ, ಕರಗಾಂವ್, ಐನಾಪುರ, ಅಳವಂಡಿ-ಬೆಟಗೇರಿ ಮತ್ತು ಸಿದ್ದಾಪುರ) ಒದಗಿಸಲು, 18,060 ಹೆ, ಭಾದಿತ ಅಚ್ಚುಕಟ್ಟು ಪ್ರದೇಶವನ್ನು ಸ್ಥಿರೀಕರಣಗೊಳಿಸಲು (02 ಯೋಜನೆಗಳು-ಮಳ್ಳಿಗೇರಿ ಹಲಗಲಿ ಮತ್ತು ಅನವಾಳ), ಹಾಗೂ 97 ಕೆರೆಗಳನ್ನು ತುಂಬಿಸಿ (03 ಯೋಜನೆಗಳು-ಸಂತಿಬಸ್ತವಾಡ-ಉಚ್ಚುಹಾಂವ್, ಇಂದರಗಿ ಮತ್ತು ಕಿರವತ್ತಿ) ಕುಡಿಯುವ ನೀರು ಮತ್ತು ಅಂತರ್ಜಲ ವೃದ್ಧಿಸಲು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿದೆ. ವಿವರಗಳನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.

ಅಲ್ಲದೇ, ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸಲು ರಾಯಚೂರಿನ ಚಿಕ್ಕಮಂಚಾಲಿ ಗ್ರಾಮದ ಬಳಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸುವ ಯೋಜನೆಯನ್ನು ರೂ.158.10ಕೋಟಿಗಳಿಗೆ, ಧಾರವಾಡ ಜಿಲ್ಲೆಯಲ್ಲಿ ಬೆಣ್ಣೆಹಳ್ಳದಿಂದ ಪ್ರವಾಹ ಪೀಡಿತ ಗ್ರಾಮಗಳಿಗೆ ತಡೆಗೋಡೆ ನಿರ್ಮಾಣ ಮಾಡಲು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ (SDMF) ಯೋಜನೆಯನ್ನು ರೂ.200.00 ಕೋಟಿಗಳಿಗೆ ಹಾಗೂ ಬೈಲಹೊಂಗಲ ವಿಧಾನಸಭಾ ಕ್ಷೇತ್ರದ ಹಳೆಯ ಏತ ನೀರಾವರಿ ಯೋಜನೆಗಳ ಪುನಶ್ಚೇತನ ಯೋಜನೆಯನ್ನು ರೂ.149.70ಕೋಟಿಗಳಿಗೆ ಹಾಗೂ ಜಾಲವಾಡಗಿ ಯೋಜನೆಯಿಂದ 29 ಕೆರೆ ತುಂಬಿಸುವ ಯೋಜನೆಗೆ ರೂ.197.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈಗಾಗಲೇ ಆಡಳಿತಾತ್ಮಕ ಅನುಮೋದನೆ ದೊರೆತ ಸುಮಾರು 19 ಯೋಜನೆಗಳ ರೂ. 5061.94 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-5ರಲ್ಲಿ ನೀಡಲಾಗಿದೆ.

ಪ್ರಸಕ್ತ ಸರ್ಕಾರದ 2023-24 ಮತ್ತು 2024-25ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಆರ್ಥಿಕವರ್ಷ | ನಿಗದಿಪಡಿಸಿರುವ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| 1 | 2023-24 | 4856.56 | 4516.02 |
| 2 | 2024-25 | 5030.95 | 3141.59 |

ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯಡಿ ಕೇಂದ್ರ ಸರ್ಕಾರ ಮತ್ತು ರಾಜ್ಯದ ಗಡಿಗಳಿಗೆ ಹೊಂದಿಕೊಂಡಂತೆ ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದಾಗಿ ಉಂಟಾಗಿರುವ ನೀರಿನ ಸಂಗ್ರಹಣೆಯಲ್ಲಿನ ಕೊರತೆಯನ್ನು ನೀಗಿಸಲು ಪರ್ಯಾಯ ಮಾರ್ಗೋಪಾಯವಾಗಿ ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಯೋಜನೆಯ ಪ್ರಸ್ತಾವನೆಯ್ನು ರೂ.15601.00 ಕೋಟಿ ಮೊತ್ತದ (2021-22ನೇ ಸಾಲಿನ ಏಕರೂಪ ದರಪಟ್ಟಿಯನ್ವಯ) ವಿವರವಾದ ವರದಿಯನ್ನು ತಯಾರಿಸಿ, ಯೋಜನಾ ವರದಿ ಹಾಗೂ ವಿಷಯ ಸೂಚಿಯನ್ನು ಸರ್ಕಾರದ ಪತ್ರ ಸಂ:ಜಸಂಇ 17 ಎಂಟಿಬಿ 2023 ದಿನಾಂಕ 06/02/2024 ರಲ್ಲಿ ಕಾರ್ಯದರ್ಶಿ, ತುಂಗಭದ್ರಾ ಮಂಡಳಿ, ಟಿ.ಬಿ ಡ್ಯಾಂ ಇವರಿಗೆ ಕಳುಹಿಸಲಾಗಿದೆ.

ಸದರಿ ವಿಷಯ ಸೂಚಿಯನ್ನು ದಿನಾಂಕ 22/11/2024 ರಂದು ಜರುಗಿದ ತುಂಗಭದ್ರಾ ಮಂಡಳಿಯ 222ನೇ ಸಭೆಯಲ್ಲಿ ಮಂಡಿಸಲಾಗಿರುತ್ತದೆ (ನಡಾವಳಿಯನ್ನು ನಿರೀಕ್ಷಿಸಲಾಗಿದೆ).

ಸದರಿ ಯೋಜನೆಯನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಸಮಹತಿ ಸಹಕಾರ ಮತ್ತು ತುಂಗಭದ್ರಾ ಮಂಡಳಿಯ ಅನುಮೋದನೆಯೊಂದಿಗೆ ಅಗತ್ಯ ಅನುದಾನ ಒದಗಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

**ಕಾವೇರಿ ನೀರಾವರಿ ನಿಗಮ:**

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ 4 ಭಾರಿ ನೀರಾವರಿ ಯೋಜನೆಗಳು, 18 ಮಧ್ಯಮ ನೀರಾವರಿ ಯೋಜನೆಗಳು ಮತ್ತು 22 ಅಣೆಕಟ್ಟುಗಳು ಒಳಗೊಂಡಿರುತ್ತವೆ. ಈ ಯೋಜನೆಗಳು ಬಹುತೇಕ ಪೂರ್ಣಗೊಂಡಿರುತ್ತವೆ. ಇದಲ್ಲದೇ 1454 ಸಣ್ಣ ನೀರಾವರಿ ಕೆರೆಗಳು ಸಹ ಒಳಪಡುತ್ತವೆ. ಪೂರ್ಣಗೊಂಡಿರುವ ಯೋಜನೆಗಳಲ್ಲಿ ಮುಖ್ಯನಾಲೆ ಮತ್ತು ವಿತರಣಾನಾಲೆಗಳು ಪುರಾತನ ನಾಲೆಗಳಾಗಿದ್ದು, ಅಣೆಕಟ್ಟುಗಳ/ಜಲಾಶಯಗಳಡಿ ಬರುವ ಅಚ್ಚುಕಟ್ಟಿನ ಪ್ರಾರಂಭದಿಂದ ಕೊನೆಯ ಹಂತದವರೆಗೆ ಸಮರ್ಪಕವಾಗಿ ನೀರನ್ನು ಹರಿಸಿ ನೀರಿನ ಮಿತವ್ಯಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ಮುಖ್ಯನಾಲೆ ಹಾಗೂ ವಿತರಣಾನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು 83 ಏತ ನೀರಾವರಿ ಯೋಜನೆಗಳು ಹಾಗೂ 82 ಸಂಖ್ಯೆಯ ಕೆರೆ ತುಂಬಿಸುವ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ನಿಗಮದಿಂದ 2023-24 ಸಾಲಿನಲ್ಲಿ ಒಟ್ಟಾರೆ 18 ಬೃಹತ್ ಕಾಮಗಾರಿಗಳಿಗೆ ರೂ.822.50 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ.

2024-25ನೇ ಸಾಲಿಗೆ ಸದರಿ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳಾಗಿದ್ದು, ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಕೈಗೊಂಡು, ನಿಗಮದ ಮಂಡಳಿಯ ಅನುಮೋದನೆಗೆ ಕ್ರಮವಹಿಸಲಾಗಿದ್ದು, ಅನುಮೋದನೆ ನಂತರ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. ವಿವರಗಳನ್ನು ಅನುಬಂಧ-6ರಲ್ಲಿ ನೀಡಲಾಗಿದೆ.

ಪ್ರಸಕ್ತ ಸರ್ಕಾರದ 2023-24 ಮತ್ತು 2024-25ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಆರ್ಥಿಕ ವರ್ಷ | ನಿಗದಿಪಡಿಸಿರುವ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| 1 | 2023-24 | 2411.53 | 2411.53 |
| 2 | 2024-25 | 3505.01 | 2413.67 |

ಸದರಿ ನಿಗಮದಲ್ಲಿ ಒಟ್ಟು 4371 ಸಂಖ್ಯೆಯ ರೂ.16979.95 ಕೋಟಿ ಮೊತ್ತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಫೆಬ್ರವರಿ ಅಂತ್ಯಕ್ಕೆ ರೂ.822.58ಕೋಟಿ ವೆಚ್ಚವಾಗಿರುತ್ತದೆ. ಈ ಪೈಕಿ ನಾಲಾ ಆಧುನೀಕರಣ ಕಾಮಗಾರಿಗಳು, ಅಣ್ಣೆಕಟ್ಟು ಜಲಾಶಯದ ಅಭಿವೃದ್ಧಿ, ಕೆರೆ ತುಂಬಿಸುವ/ಕೆರೆ ಅಭಿವೃದ್ಧಿ, ಸೇತುವೆ ನಿರ್ಮಾಣ, ಏತ ನೀರಾವರಿ ಕಾಮಗಾರಿಗಳು ಒಳಗೊಂಡಿದ್ದು, ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.

ಸದರಿ ನಿಗಮದಿಂದ 2025-26ನೇ ಸಾಲಿನ ಹಾಗೂ ಮುಂಬರುವ ಆರ್ಥಿಕ ವರ್ಷಗಳಲ್ಲಿ ಕೈಗೊಳ್ಳಲು ನೂತನವಾಗಿ ಗುರುತಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕಾಮಗಾರಿಗಳನ್ನು ಗುರುತಿಸಿ ಅಗತ್ಯವಿರುವ ವಿವರವಾದ ಯೋಜನಾ ವರದಿಗಳನ್ನು ತಯಾರಿಸಲಾಗಿರುತ್ತದೆ. ಕಾಮಗಾರಿಗಳು ಹಾಗೂ ಅಂದಾಜು ಮೊತ್ತದ ವಿವರಗಳನ್ನು ಅನುಬಂಧ-7ರಲ್ಲಿ ನೀಡಲಾಗಿದೆ.

**ರಾಜ್ಯಕ್ಕೆ ಕುಡಿಯುವ ನೀರನ್ನು ಪೂರೈಸುವ ಸಲುವಾಗಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ:**

ಕೇಂದ್ರ ಜಲ ಆಯೋಗ, ನವದೆಹಲಿರವರು ಸದರಿ ಯೋಜನೆಯ ಕುರಿತು ಅಭಿಪ್ರಾಯವನ್ನು ನೀಡುವಂತೆ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ (CWMA) ವನ್ನು ಕೋರಲಾಗಿರುತ್ತದೆ. ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ (CWMA) ಸಭೆಗಳಲ್ಲಿ ಸದರಿ ವಿಷಯವು ಚರ್ಚೆಗೆ ಒಳಪಟ್ಟಿದ್ದು, ಸದರಿ ವಿಷಯವು ಹಲವಾರು ಬಾರಿ ಮುಂದೂಡಲ್ಪಟ್ಟಿರುತ್ತದೆ ಹಾಗೂ ದಿನಾಂಕ: 02.02.2024 ರಂದು ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (CWMA) 28ನೇಯ ಸಭೆಯಲ್ಲಿ ಸದರಿ ವಿಷಯವು ಚರ್ಚೆಗೆ ಒಳಪಟ್ಟಿದ್ದು, ಸದರಿ ಸಭೆಯ ನಡವಳಿಯಲ್ಲಿ ಕೆಳಕಂಡಂತೆ ನಮೂದಿಸಲಾಗಿರುತ್ತದೆ.

*"Taking in to the account the views of all the members of CWMA present in the meeting, Chairman, CWMA mentioned that according to the views of majority of the members of the authority and in his view also, a decision is taken to*

***return the project back to CWC for examination of various technical/economical aspects of the project for establishing its feasibility or otherwise, and further necessary action at their end".***

ಸದರಿ ಯೋಜನೆಗೆ ಅವಶ್ಯವಿರುವ ಅರಣ್ಯ ಭೂಮಿಗೆ ಬದಲಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸುವ compensatory afforestation landಅನ್ನು ಗುರುತಿಸಲಾಗಿದ್ದು, ಪರಿಹಾರ ಅರಣ್ಯೀಕರಣ ಭೂಮಿಯನ್ನು(CA Land) ಗುರುತಿಸುವ ಕಾರ್ಯಗಳಿಗೆ ವೇಗ ನೀಡಲು ದಿನಾಂಕ:19.11.2024ರಂದು ಮಂಡ್ಯ ಜಿಲ್ಲಾಧಿಕಾರಿಗಳು, ದಿನಾಂಕ:04.01.2025ರಂದು ಚಾಮರಾಜನಗರ ಜಿಲ್ಲಾಧಿಕಾರಿಗಳು ಮತ್ತು ದಿನಾಂಕ:21.01.2025ರಂದು ರಾಮನಗರ ಜಿಲ್ಲಾಧಿಕಾರಿರವರುಗಳು, ಕಂದಾಯ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಿ ಶೀಘ್ರವಾಗಿ ಸೂಕ್ತತಾ ಪ್ರಮಾಣ ಪತ್ರವನ್ನು(Suitability certificate)ಪಡೆಯಲು ಕ್ರಮವಹಿಸಲಾಗಿದೆ.

ಮುಂದುವರೆದು, ದಿನಾಂಕ:24.02.2025ರಂದು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರರವರು ಮೇಕೆದಾಟು ಯೋಜನೆಗೆ ತೀರುವಳಿ ನೀಡಬೇಕೆಂದು ಕೇಂದ್ರ ಜಲಆಯೋಗಕ್ಕೆ ಖುದ್ದು ಭೇಟಿ ನೀಡಿ ಮನವಿ ಮಾಡಿರುತ್ತಾರೆ.

**<u>ವಿಶ್ವೇಶ್ವರಯ್ಯ ಜಲ ನಿಗಮ:</u>**

ವಿಶ್ವೇಶ್ವರಯ್ಯ ಜಲ ನಿಗಮದಡಿ ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಗಳಾದ ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಹಾಗೂ ತರೀಕೆರೆ, ಚಿಕ್ಕಮಗಳೂರು, ಕಡೂರು ಕೆರೆ ತುಂಬಿಸುವ ಯೋಜನೆಗಳನ್ನು ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಅಲ್ಲದೇ, ಬಹು ಹಿಂದೆ ನಿರ್ಮಾಣಗೊಂಡ ವಾಣಿವಿಲಾಸ ಸಾಗರ ಜಲಾಶಯ ಯೋಜನೆ ಮತ್ತು ಗಾಯತ್ರಿ ಜಲಾಶಯಗಳ ನಿರ್ವಹಣೆಯನ್ನು ಸಹ ನಿಗಮದಡಿ ಕೈಗೆತ್ತಿಕೊಳ್ಳಲಾಗಿರುತ್ತದೆ.

ಸದರಿ ನಿಗಮದಡಿಯಲ್ಲಿ ಈಗಾಗಲೇ ಅನುಮೋದನೆಗೊಂಡು ಪ್ರಗತಿಯಲ್ಲಿರುವ ಯೋಜನೆಗಳ ವಿವರ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ-8ರಲ್ಲಿ ನೀಡಲಾಗಿದೆ.

ಪ್ರಸಕ್ತ ಸರ್ಕಾರದ 2023-24 ಮತ್ತು 2024-25ನೇ ಸಾಲಿನಲ್ಲಿ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ನಿಗದಿಪಡಿಸಿದ ಅನುದಾನ ಹಾಗೂ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಕೆಳಗಿನಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಆರ್ಥಿಕವರ್ಷ | ನಿಗದಿಪಡಿಸಿರುವ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|
| 1 | 2023-24 | 3952.00 | 3952.00 |
| 2 | 2024-25 | 4249.92 | 2928.77 |

ಸದರಿ ಕಾಮಗಾರಿಗಳನ್ನು 2025-26ನೇ ಸಾಲಿಗೆ ಹಂಚಿಕೆಯಾಗುವ ಅನುದಾನದ ಲಭ್ಯತೆಯನ್ನು ಆಧರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ನಂತರ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು.

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**

# ಅನುಬಂಧ-1

## ಕೃಷ್ಣಾ ಭಾಗ್ಯ ಜಲ ನಿಗಮ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುಧಾಮ್ ದಾಸ್, ಶ್ರೀ ಮಧು.ಜಿ.ಮಾದೇಗೌಡ ಇವರುಗಳ ನಿಯಮ-72ರಡಿ ಗಮನ ಸೆಳೆಯು ಸೂಚನೆಗೆ ಉತ್ತರ

### 2023–24ನೇ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳು

| ಕ್ರ.ಸಂ. | ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) | ಷರಾ |
|---|---|---|---|
| 1 | Construction of Distributaries and its laterals of Korwar Branch Canal under Chimmalagi LIS | 121.00 | ಗುತ್ತಿಗೆ ವಹಿಸಲು ಅನುಮೋದನೆ ನೀಡಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದೆ. |
| 2 | Construction of Distributaries and its laterals Nagathan Branch Canal under Chimmalagi LIS (Package-1) | 116.00 | |
| 3 | Construction of Distributaries & its Laterals of Nagathan Branch Canal under Chimmalagi LIS (Package-2) | 177.00 | |
| 4 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಉಪಯೋಜನೆಯ ಭೀಮಾ ಪ್ಲಾಂಕ್‌ರಡಿಯ ಎಸ್.ಬಿ.ಸಿ ಕಿ.ಮೀ 75.30 ರಿಂದ ಕಿ.ಮೀ 98.30 ರ ವರೆಗಿನ ನಿರ್ಮಾಣ ಕಾಮಗಾರಿ | 122.53 | |
| 5 | NRBC ವಿಸ್ತರಣೆ ಯೋಜನೆಯಡಿ ಕಿ.ಮೀ 112.00 ರಿಂದ 113.50 ಗಳಲ್ಲಿ Cross Regulator/ Escapeಗಳ ನಿರ್ಮಾಣ ಕಾಮಗಾರಿ | 8.86 | |
| 6 | AIBP-PMKSY ನಾರಾಯಣಪುರ ಬಲದಂಡೆ ಕಾಲುವೆ ಆಧುನೀಕರಣ ಯೋಜನೆಯಡಿ ಸ್ಕಾಡಾ (ಫೇಸ್–1) ಕಾಮಗಾರಿ | 228.00 | |
| 7 | ಹೊರ್ತಿ–ರೇವಣ ಸಿದ್ದೇಶ್ವರ ಏತ ನೀರಾವರಿ ಯೋಜನೆ ಹಂತ–2ರ ಕಾಮಗಾರಿ | 865.00 | ಟೆಂಡರ್ ಕರೆಯಲು ಅನುಮೋದನೆ ನೀಡಿದ್ದು, ಪ್ರಸ್ತುತ ಆರ್ಥಿಕ ಬಿಡ್ ಅನುಮೋದನೆ ಹಂತದಲ್ಲಿದೆ. |
| 8 | ಮುಳವಾಡ ಏತ ನೀರಾವರಿ ಯೋಜನೆ ಹಂತ–3ರಡಿ ಬರುವ ಬಬಲೇಶ್ವರ ಶಾಖಾ ಕಾಲುವೆಯಿಂದ ವಿತರಣಾ ಕಾಲುವೆ ಸಂಖ್ಯೆ:15 ಪ್ಯಾಕೇಜ್ ಕಾಮಗಾರಿ | 124.00 | |
| 9 | ಮುಳವಾಡ ಏತ ನೀರಾವರಿ ಯೋಜನೆ ಹಂತ–3ರಡಿ ಬರುವ 5th A & B lifts | 154.00 | |
| 10 | ಹೊರ್ತಿ–ರೇವಣ ಸಿದ್ದೇಶ್ವರ ಏತ ನೀರಾವರಿ ಯೋಜನೆ ಹಂತ–3ರ ಕಾಮಗಾರಿ | 1400.00 | ಟೆಂಡರ್ ಕರೆಯಲು ಅನುಮೋದನೆ ನೀಡಿದ್ದು, ಪ್ರಸ್ತುತ ತಾಂತ್ರಿಕ ಬಿಡ್ ಅನುಮೋದನೆ ಹಂತದಲ್ಲಿದೆ |
| 11 | ಕೆರೂರು ಏತ ನೀರಾವರಿ ಯೋಜನೆ ಹಂತ–2ರ ಪೈಪ್‌ಲೈನ್ ಜಾಲದ ಕಾಲುವೆ ನಿರ್ಮಾಣ | 679.00 | ಟೆಂಡರ್ ಕರೆಯಲು ಅನುಮೋದನೆ ನೀಡಿದ್ದು, ಟೆಂಡರ್‌ಕರೆಯುವ ಪ್ರಕ್ರಿಯೆಯಲ್ಲಿದೆ. |
| | ಒಟ್ಟು | 3995.39 | |

# ಅನುಬಂಧ-2

## ಕೃಷ್ಣಾ ಭಾಗ್ಯ ಜಲ ನಿಗಮ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುಧಾಮ್ ದಾಸ್, ಶ್ರೀ ಮಧು.ಜಿ.ಮಾದೇಗೌಡ ಇವರುಗಳ ನಿಯಮ-72ರಡಿ ಗಮನ ಸೆಳೆಯು ಸೂಚನೆಗೆ ಉತ್ತರ

### 2024–25 ನೇ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳು

| ಕ್ರ.ಸಂ. | ಕಾಮಗಾರಿಗಳ ಹೆಸರು | ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) | ಷರಾ |
|---|---|---|---|
| 1 | ಮಸ್ಕಿ ಮತ್ತು ಪಾಮನಕಲ್ಲು ಏತ ನೀರಾವರಿ ಯೋಜನೆ (ಹೊಸ ಯೋಜನೆ) | 970.00 | 2024–25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಹಂತದಲ್ಲಿದೆ. |
| 2 | ಯಲಬುರ್ಗಾ & ಕುಕನೂರು ತಾಲ್ಲೂಕಿನಡಿ 38 ಕೆರೆಗಳಿಗೆ ನೀರು ತುಂಬಿಸುವ ಯೋಜನೆ | 990.00 | |
| 3 | BTDAರಡಿ ಬಾಗಲಕೋಟೆ ದಿಂದ ಸಂಗಮಕ್ರಾಸ್ ನವರೆಗೆ (16ಕಿ.ಮೀ) ರಸ್ತೆ ಸುಧಾರಣೆ ಕಾಮಗಾರಿ | 28.00 | ಪ್ರಸ್ತುತ ಆರ್ಥಿಕ ಬಿಡ್ ಅನುಮೋದನೆ ಹಂತದಲ್ಲಿದೆ. |
| 4 | ಮುಳವಾಡ ಏತ ನೀರಾವರಿ ಯೋಜನೆ ಹಂತ–3ರಡಿ ಬರುವ ಸಂಕನಾಳ ಶಾಖಾ ಕಾಲುವೆಯಿಂದ ವಿತರಣಾ ಕಾಲುವೆ ಸಂಖ್ಯೆ:1ರಿಂದ 8 ರವರೆಗಿನ ನಿರ್ಮಾಣಕಾಮಗಾರಿ | 51.00 | |
| 5 | ಚಡಚಣ ಏತ ನೀರಾವರಿ ಯೋಜನೆಗೆ ಸ್ಕಾಡಾ ಅಳವಡಿಸುವ ಕಾಮಗಾರಿ | 54.00 | |
| 6 | Construction of Additional pump house to Navnagar Bagalkot | 41.27 | ಟೆಂಡರ್ ಕರೆಯಲು ಅನುಮೋದನೆ ದಿ:22.01.2025 ರಂದು ಜರುಗಿದ 142ನೇ ಮಂಡಳಿ ಸಭೆಯಲ್ಲಿ ಅನುಮೋದನೆಯಂತೆ ಕ್ರಮ ಕೈಗೊಳ್ಳಲಾಗುವುದು. |
| 7 | Construction of 19 MLD SBR technology Sewage Treatment Plant in Navnagar Bagalkot | 33.20 | |
| 8 | ಮುಳವಾಡ ಏತ ನೀರಾವರಿ ಹಂತ–3ರಡಿ ಬರುವ ಹೂವಿನ ಹಿಪ್ಪರಗಿ ಶಾಖಾ ಕಾಲುವೆಯ ವಿತರಣಾ ಕಾಲುವೆ ಸಂಖ್ಯೆ 17 ರಿಂದ 34 ರವರೆಗಿನ ನಿರ್ಮಾಣದ ಕಾಮಗಾರಿ | 107.47 | |
| 9 | ಮುಳವಾಡ ಏತ ನೀರಾವರಿ ಯೊಜನೆ ಹಂತ–3ರಡಿ ಬರುವ ತಿಡಗುಂದಿ ಶಾಖಾ ಕಾಲುವೆ ಕಿ.ಮೀ 49.20 ರಿಂದ 65.585 ವರೆಗೆ ಬರುವ ಪೈಪ್‌ಲೈನ್ ನಿರ್ಮಾಣದ ಕಾಮಗಾರಿ | 534.00 | |
| 10 | ಮಲ್ಲಾಬಾದ್ ಏತ ನೀರಾವರಿ ಯೋಜನೆಯಡಿ ಬರುವ ಕಾಲುವೆ ಜಾಲದ 03 ಪ್ಯಾಕೇಜ್ ಕಾಮಗಾರಿಗಳು | 359.67 | |
| 11 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ ಬರುವ ಭೀಮಾ ಪ್ಲಾಂಕ್ (SBC Extension) ಯೋಜನೆಯಡಿ ಬರುವ 02 ಪ್ಯಾಕೇಜ್ ಕಾಮಗಾರಿಗಳು | 214.80 | |
| 12 | ನಾರಾಯಣಪೂರ ಬಲದಂಡೆ ಮುಖ್ಯ ಕಾಲುವೆ ವಿಸ್ತರಣೆಯಡಿ ಕಿ.ಮೀ.153.040 ರಿಂದ ಕಿ.ಮೀ153.840ರ ವರೆಗೆ (800ಮೀ) ಆರ್.ಸಿ.ಸಿ. ಅಕ್ವಡಕ್ಟ್ ನಿರ್ಮಾಣ ಕಾಮಗಾರಿ | 19.42 | |
| 13 | ಸನ್ನತಿ ಬ್ಯಾರೇಜಿನ ಹಿನ್ನೀರಿನಲ್ಲಿ ಮುಳಗಡೆಯಾಗಿರುವ ಟಿ.ಸಿಗಳನ್ನು FRL 376 ಮೀ. ಮೇಲ್ಭಾಗಕ್ಕೆ ಸ್ಥಳಾಂತರಿಸುವ ಕಾಮಗಾರಿ | 9.90 | |
| 14 | ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಲು & ಸಮಾಲೋಚಕರನ್ನು ನೇಮಿಸುವ ಕಾರ್ಯ | 14.12 | |
| 15 | NLBC-ERM ಯೋಜನೆಯಡಿ ಹಂತ–1ರಡಿ ಬರುವ ಸ್ಕಾಡಾ ಕಾಮಗಾರಿಯ 04 ವರ್ಷದ ಅವಧಿಗೆ ಓ&ಎಂ | 20.77 | ದಿ:22.01.2025 ರಂದು ಜರುಗಿದ 142ನೇ ಮಂಡಳಿ ಸಭೆಯಲ್ಲಿ ಅನುಮೋದನೆಯಂತೆ ಕ್ರಮ ಕೈಗೊಳ್ಳಲಾಗುವುದು. |
| 16 | ಕರ್ನಾಳ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾ ವರದಿಗೆ ಅನುಮೋದನೆ | 50.75 | |
| | ಒಟ್ಟು | **3498.37** | |

# ಅನುಬಂಧ-3

## ಕೃಷ್ಣಾ ಭಾಗ್ಯ ಜಲ ನಿಗಮ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುಧಾಮ್ ದಾಸ್, ಶ್ರೀ ಮಧು.ಜಿ.ಮಾದೇಗೌಡ ಇವರುಗಳ ನಿಯಮ-72ರಡಿ ಗಮನ ಸೆಳೆಯು ಸೂಚನೆಗೆ ಉತ್ತರ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳ ವಿವರ, ಅಂದಾಜು ಮೊತ್ತ ಹಾಗೂ ವೆಚ್ಚದ ವಿವರಗಳು ಈ ಕೆಳಗಿನಂತಿವೆ :

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಯೋಜನೆಗಳ ವಿವರ | ಅಂದಾಜು ಮೊತ್ತ | ಸಂಚಿತ ವೆಚ್ಚ ಇಲ್ಲಿಯವರೆಗೆ | ಬಾಕಿ ಮೊತ್ತ |
|---|---|---|---|---|
| 1 | 2 | 3 | 4 | 5 |
| 1. | ನಾರಾಯಣಪುರ ಬಲದಂಡೆ ಕಾಲುವೆ ಡಿಸ್ಟ್ರಿ., .ನಂ.9(ಎ) | 288.72 | 284.88 | 3.84 |
| 2. | ಬೂದಿಹಾಳ್-ಪೀರಾಪುರ ಏತ ನೀರಾವರಿ ಹಂತ-1 | 2,000.00 | 1,298.19 | 701.81 |
| 3. | ನಂದವಾಡಗಿ ಏತ ನೀರಾವರಿ | 2359.26 | 1,329.13 | 1030.13 |
| 4. | ಕೆರೂರು ಏತ ನೀರಾವರಿ | 1,425.00 | 446.81 | 978.19 |
| 5. | ಕೃ.ಮೇ.ಯೋಜನೆ ಹಂತ-3 9 ಉಪಯೋಜನೆಗಳು | 18,028.44 | 11,283.30 | 6,745.14 |
| 6. | ನಾಗರಬೆಟ್ಟ ಏತ ನೀರಾವರಿ | 170.70 | 119.10 | 51.60 |
| 7. | ಹೆರಕಲ್ (ದಕ್ಷಿಣ) ಏತ ನೀರಾವರಿ -ವಿಸ್ತರಣೆ | 238.00 | 95.63 | 142.37 |
| 8. | ಹೊರ್ತಿ ರೇವಣಸಿದ್ಧೇಶ್ವರ ಏತ ನೀರಾವರಿ | 3098.00 | 213.22 | 2884.78 |
| 9. | ಬೂದಿಹಾಳ್-ಪೀರಾಪುರ ಏತ ನೀರಾವರಿ ಹಂತ-2 | 1300.00 | 838.53 | 461.47 |
| 10. | ಯಳ್ಳಿಗುತ್ತಿ ಏತ ನೀರಾವರಿ | 35.00 | 21.40 | 13.60 |
| 11. | ಭಗವತಿ ಏತ ನೀರಾವರಿ | 346.00 | 19.80 | 326.20 |
| 12. | ನಾರಾಯಣಪುರ ಎಡದಂಡೆ ಕಾಲುವೆಯ ಜಾಲದ ಆಧುನೀಕರಣ ಯೋಜನೆ | 4699.00 | 4540.50 | 158.50 |
| 13. | ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ ಆಧುನೀಕರಣ ಯೋಜನೆ | 4199.00 | 1909.11 | 2289.89 |
| 14. | ಚಡಚಣ ಏತ ನೀರಾವರಿ ಯೋಜನೆ | 485.00 | 388.01 | 96.99 |
| 15. | ಸನ್ನತಿ ಏತ ನೀರಾವರಿ ಯೋಜನೆ | 804.66 | 552.00 | 252.66 |
| 16. | ದೇವತ್ಕಲ್ ಏತ ನೀರಾವರಿ ಯೋಜನೆ | 120.00 | 14.59 | 105.41 |
| 17. | ಭೀಮಾ ನದಿಯಿಂದ ನೀರನ್ನು ಎತ್ತಿ ಯಾದಗಿರಿ ಜಿಲ್ಲೆಯ 35 ಕೆರೆ ತುಂಬುವ ಯೋಜನೆ | 440.00 | 338.35 | 101.65 |
| 18. | ಕೃಷ್ಣಾ ನದಿಯಿಂದ ನೀರನ್ನು ಎತ್ತಿ ರಾಯಚೂರು ತಾಲ್ಲೂಕಿನ 18 ಕೆರೆ ತುಂಬುವ ಯೋಜನೆ | 192.00 | 152.52 | 39.48 |
| 19. | ಭೀಮಾ ನದಿಯಿಂದ ನೀರನ್ನು ಎತ್ತಿ ಗುರುಮಿಟ್‌ಕಲ್ ತಾಲ್ಲೂಕಿನ 20 ಕೆರೆ ತುಂಬುವ ಯೋಜನೆ | 165.00 | 50.58 | 114.32 |
| 20. | ಕೃಷ್ಣಾ ನದಿಯಿಂದ ನೀರನ್ನು ಎತ್ತಿ ದೇವದುರ್ಗಾ ತಾಲ್ಲೂಕಿನ 28 ಕೆರೆ ತುಂಬುವ ಯೋಜನೆ | 406.00 | 133.00 | 273.00 |
| 21. | ರಾಮಥಾಳ ಏತ ನೀರಾವರಿ ಯೋಜನೆ | 1100.00 | 1081.28 | 18.72 |
| 22. | ಆಲಮಟ್ಟಿ ಎಡದಂಡೆ ಕಾಲುವೆಯ ಜಾಲದ ಆಧುನೀಕರಣ ಯೋಜನೆ | 205.00 | 90.00 | 115.00 |
| 23. | Advihal-Kudal Sangam Bridge | 59.80 | 47.21 | 12.59 |
| 24. | **Dam Rehabilitation and Improvements Projects (DRIP)** | 495.20 | 252.43 | 242.77 |
| | ಒಟ್ಟು | 42,662.78 | 25,503.57 | 17,165.11 |

**ಅನುಬಂಧ-4**

**ಕರ್ನಾಟಕ ನೀರಾವರಿ ನಿಗಮ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ ಸುಧಾಮ್ ದಾಸ್, ಶ್ರೀ ಮಧು ಜಿ ಮಾದೇಗೌಡ, ಇವರು ನಿಯಮ 72ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

**(ರೂ.ಕೋಟಿಗಳಲ್ಲಿ, ಜಿಎಸ್.ಟಿ. ಸೇರಿಸಿ)**

| ಕ್ರ.ಸಂ | **ಕಾಮಗಾರಿ /ಯೋಜನೆಗಳ ಹೆಸರು** | **ಪರಿಷ್ಕೃತ ಟೆಂಡರಿಗಿಟ್ಟ ಮೊತ್ತ** | **ಗುತ್ತಿಗೆ ಮೊತ್ತ** |
|---|---|---|---|
| 1 | Filling up of Indargi and other 27 Tanks by lifting water from Tungabhadra River in Gangavathi Taluka, Koppal district | 146.43 | 153.75 |
| 2 | Providing irrigation facility to 3535 ha Melligeri Halagali Lift Irrigation Scheme (Phase-2) | 69.12 | 72.58 |
| 3 | Improvements to SR of Dy.55 of Tungabhadra LBC (in selected reaches) | 6.93 | 6.38 |
| 4 | Santibastavad village in Uchagaon hobli by Lift-2: Santibastavad Scheme] | 269.29 | 282.76 |
| 5 | Anwal Lift Irrigation Scheme (Stage-II) | 263.97 | 275.85 |
| 6 | Siddapura Lift Irrigation Scheme | 197.95 | 207.84 |
| 7 | Alawandi-Betageri LIS (Additional work) | 11.23 | 11.79 |
| 8 | Karagon Lift Irrigation Scheme (Phase 1) | 108.74 | 114.17 |
| 9 | Kiravatti Tank Filling Scheme (Phase 1) | 172.91 | 181.56 |
| 10 | Sri Chennavrushabendra LIS (Phase II) | 327.99 | 344.39 |
| 11 | Chikkamanchali Bridge cum Barrage | 138.55 | 145.48 |
| 12 | Improvement to existing tanks under Amrut Sarovar in Dharwad District | 29.53 | 30.73 |
| 13 | Raja Lakhamagouda Udyan Kashi Hidkal Dam [Package-2] | 23.37 | 24.54 |
| 14 | Ainapur Lift Irrigation Scheme on turnkey basis (Phase-1) | 107.07 | 111.10 |
|  | **ಒಟ್ಟು** | **1873.08** | **1962.92** |

ಅನುಬಂಧ-5

ಕರ್ನಾಟಕ ನೀರಾವರಿ ನಿಗಮ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ ಸುಧಾಮ್ ದಾಸ್, ಶ್ರೀ ಮಧು ಜಿ ಮಾದೇಗೌಡ, ಇವರು ನಿಯಮ 72ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ

ಟೆಂಡರ್ ಆಹ್ವಾನಿಸಬೇಕಾಗಿರುವ ಕಾಮಗಾರಿಗಳ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ |
|---|---|---|
| 1. | Kottalagi LIS (Ammajeshwari LIS) **Phase-II** | **590.81** |
| 2. | Mahalakshmi LIS - **Phase-II** | **179.30** |
| 3. | Kiravatti Tank Filling Scheme-Phase-II | **108.22** |
| 4. | ಬೀಮಾ ಮತು ಕಾಗಿಣಾ ನದಿಗಳ ಸಂಗಮದಿಂದ ನೀರನ್ನೆತ್ತಿ ಬೆಣ್ಣೆತೋರಾ ಜಲಾಶಯಕ್ಕೆ ತುಂಬಿಸುವ**Phase-II** | **276.31** |
| 5. | Sasalatti Shivalingeshwara LIS-2, Phase-II | **142.50** |
| 6. | Arabhavi TFS- Phase II | **131.57** |
| 7. | Sattigeri LIS, Phase-II | **341.30** |
| 8. | Ainapur Lift Irrigation Scheme -Phase-II | **78.85** |
| 9. | Lolasur Bridge – Phase-II & III | **330.75** |
| 10. | Karagon Lift Irrigation Scheme-Phase-II | **467.00** |
| 11. | Aurad & Mehakar LIS- Phase-II | **772.70** |
| 12. | Naragund PSC Pipe Replacement | **80.00** |
| 13. | Mareguddi LIS | **216.50** |
| 14. | Thupparihalla FPW- Phase-II | **162.00** |
| 15. | Belthangadi LIS Phase-II | **66.22** |
| 16. | Hingaragi TFS | **143.53** |
| 17. | Raja Lakhamagouda Udyan Kashi Hidkal Dam – Phase-I & II | **74.38** |
| 18. | Construction of Distributary Canal Network of Varahi Left Bank Canal to provide irrigation facility to 1353.31 Ha. | **350.00** |
| 19. | Aurad & Mehakar LIS- Phase-I | **550.00** |
| | ಒಟ್ಟು | **5061.94** |

*******

ಅನುಬಂಧ-6

## ಕಾವೇರಿ ನೀರಾವರಿ ನಿಗಮ ನಿಯಮಿತ

### ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಪಿ.ಸುಧಾಮ್ ದಾಸ್, ಶ್ರೀ.ಮಧು ಜಿ ಮಾದೇಗೌಡ ಹಾಗೂ ಇತರರು ನಿಯಮ 72 ಯಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ

| Sl.No | Name of work | Est. Amount (Rs. in Crore) | Administrative approval from Govt. |
|---|---|---|---|
| 1 | ತುಮಕೂರು ಶಾಖಾ ನಾಲೆಯ ಸರಪಳಿ 101.725 ಕಿ. ಮೀ ನಿಂದ ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಶಿರಾ ತಾಲ್ಲೂಕಿನ 42 ಗ್ರಾಮಗಳ ಕುಡಿಯುವ ನೀರನ್ನು ಪೂರೈಸಲು ಮಠದಹಳ್ಳ ಹಾಗೂ ಇತರೆ ಕೆರೆಗಳಿಗೆ ನೀರೊದಗಿಸುವ ಏತ ಯೋಜನೆ ಕಾಮಗಾರಿ | 48.75 | ಜಸಂಇ 113 ಎನ್.ಹೆಚ್.ಪಿ 2023, ದಿನಾಂಕ: 07.03.2024 |
| 2 | Construction of Cut & Cover, RCC Trough and C D Works to Lokasara Branch Canal from Ch: 6.15 to 10.60 km in Mandya District | 22.00 | ಜಸಂಇ 32 ಎಂ.ಎಂ.ಕೆ 2024, ದಿನಾಂಕ: 07.03.2024 |
| 3 | Improvement to existing stream's and filling up of series of barrages across the stream from Arkavathi river in Kanakapura taluk of Ramanagar district ಕಾಮಗಾರಿ | 135.00 | ಜಸಂಇ 33 ಎಂ.ಎಂ.ಕೆ 2024, ದಿನಾಂಕ: 07.03.2024 |
| 4 | Lifting Water From Kaveri River Near Sangama To Fill Up Hegganur And Other 20 Tanks In Kanakapura Taluk Of Ramanagar District | 108.00 | ಜಸಂಇ 34 ಎಂ.ಎಂ.ಕೆ 2024, ದಿನಾಂಕ: 07.03.2024 |
| 5 | Modernization of Kemmannu Canal under Maddur Taluk ಕಾಮಗಾರಿ | 90.00 | ಜಸಂಇ 14 ಎಂ.ಎಂ.ಕೆ 2024, ದಿನಾಂಕ: 07.03.2024 |
| 6 | ಹಾರಂಗಿ ಜಲಾಶಯ ಯೋಜನೆಯ ಅಡಿಯಲ್ಲಿ ಬರುವ ಹಾರಂಗಿ ಎಡದಂಡೆ ನಾಲೆಯ ಸರಪಳಿ 6.875 ಕಿ.ಮೀ ರಿಂದ ಸರಪಳಿ 14.75 ಕಿ.ಮೀ ವರೆಗೆ ರೀಮಾಡಲಿಂಗ್ ಕಾಮಗಾರಿ | 72.25 | ಜಸಂಇ 22 ಎಂ.ಎಂ.ಕೆ 2023, ದಿನಾಂಕ: 15.03.2024 |
| 7 | Construction of Road Bridge across Arkavthy River connecting Arobele to Mullahalli and Kokarehosahalli village in Kodihalli hobli of Kanakapura Taluk of Ramanagara District. | 9.50 | ಜಸಂಇ 26 ಎಂ.ಎಂ.ಕೆ 2024, ದಿನಾಂಕ: 15.03.2024 |
| 8 | Construction of Road Bridge cum Barrage across River Arkavthy connecting Mullahalli to Nallahalli village of Kanakapura Taluk of Ramanagara District. | 11.85 | ಜಸಂಇ 23 ಎಂ.ಎಂ.ಕೆ 2024, ದಿನಾಂಕ: 07.03.2024 |
| 9 | Construction of bridge at the downstream of Manchanabele reservoir. | 13.60 | ಜಸಂಇ 45 ಎಂ.ಎಂ.ಕೆ 2024, ದಿನಾಂಕ: 15.03.2024 |
| 10 | Construction of Public school building near Harobele under Arkavathy Rehabilitation. | 9.90 | ಜಸಂಇ 31 ಎಂ.ಎಂ.ಕೆ 2024, ದಿನಾಂಕ: 15.03.2024 |
| 11 | Construction of Public school building near Marigowdanadoddi village under Arkavathy Rehabilitation. | 9.90 | ಜಸಂಇ 29 ಎಂ.ಎಂ.ಕೆ 2024, ದಿನಾಂಕ: 15.03.2024 |
| 12 | Construction of Bridge across River Arkavthy at ch. 4.90 km of Mayaganahalli to Bejjgarahalli katte MDR via sugganahalli of Ramanagara Taluk. | 10.00 | ಜಸಂಇ 25 ಎಂ.ಎಂ.ಕೆ 2024, ದಿನಾಂಕ: 15.03.2024 |
| 13 | ಯಗಚಿ ಎಡದಂಡೆ ನಾಲೆಯ ಕಾಮಸಮುದ್ರ ಶಾಖಾ ನಾಲೆಯ ಸರಪಳಿ 0.00 ಕಿ.ಮೀ ನಿಂದ 5.00 ಕಿ.ಮೀ ವರೆಗಿನ ಉಳಿಕೆ ನಾಲಾ ಅಭಿವೃದ್ಧಿ ಕಾಮಗಾರಿ. | 12.00 | ಜಸಂಇ 218 ಎನ್.ಹೆಚ್.ಪಿ 2023, ದಿನಾಂಕ: 07.03.2024 |
| 14 | ತಿಪಟೂರು ತಾಲ್ಲೂಕಿನ, ನಾಗಮಂಗಲ ವಿತರಣಾ ನಾಲೆ ವ್ಯಾಪ್ತಿಯಲ್ಲಿನ ನೊಣವಿನಕೆರೆಯ ವಿಸ್ತರಣಾ ಪ್ರದೇಶಕ್ಕೆ (Nonavinakere extension area) ನೊಣವಿನಕೆರೆಯಿಂದ ನೀರು ಸರಬರಾಜು ಮಾಡುವ ಕಾಮಗಾರಿ. | 9.75 | ಜಸಂಇ 45 ಎನ್.ಹೆಚ್.ಪಿ 2024, ದಿನಾಂಕ: 15.03.2024 |
| 15 | Scheme to lift Water from Arkavathy River near Kanakapura and fill Mavathur tank in Maralavadi hobli of Kanakapura taluk. | 20.00 | ಜಸಂಇ 40 ಎಂ.ಎಂ.ಕೆ 2024, ದಿನಾಂಕ: 07.03.2024 |
| 16 | ಹೇಮಾವತಿ ಎಡದಂಡೆ ನಾಲೆಯ ವಿತರಣಾ ನಾಲೆ 71 ರಿಂದ 72 ರ ರೀಮಾಡಲಿಂಗ್ ಕಾಮಗಾರಿ | 49.75 | ಜಸಂಇ 24 ಎಂ.ಎಂ.ಕೆ 2023, ದಿನಾಂಕ: 15.03.2024 |
| 17 | Arkavathy River Front Development Project in Ramanagara Town limits under MRP in Ramanagara Taluk of Ramanagara District. | 156.00 | ಜಸಂಇ 27 ಎಂ.ಎಂ.ಕೆ 2024, ದಿನಾಂಕ: 07.03.2024 |
| 18 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಕೆರೆತೊಣ್ಣೂರು ಕೋಡಿಹಳ್ಳವನ್ನು ಲಕ್ಷ್ಮೀಸಾಗರ ಗ್ರಾಮದಿಂದ ಹಿರೋಡೆಕೆರೆವರೆಗೆ ಅಭಿವೃದ್ಧಿ ಪಡಿಸುವ ಕಾಮಗಾರಿ ಯ ರೂ.34.25 ಕೋಟಿ ಮೊತ್ತದ | 34.25 | ಜಸಂಇ 44 ಎಂ.ಎಂ.ಕೆ 2024, ದಿನಾಂಕ: 15.03.2024 |
| | ಒಟ್ಟು | **822.50** | |

ಅನುಬಂಧ-7

ಕಾವೇರಿ ನೀರಾವರಿ ನಿಗಮ ನಿಯಮಿತ

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಹೆಚ್.ಪಿ.ಸುಧಾಮ್ ದಾಸ್, ಶ್ರೀ.ಮಧು ಜಿ ಮಾದೇಗೌಡ ಹಾಗೂ ಇತರರು ನಿಯಮ 72 ಯಡಿಯಲ್ಲಿ ನೀಡಿರುವ ಸೂಚನೆಗೆ

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ ಕೋಟಿಗಳಲ್ಲಿ |
|---|---|---|
| 1 | Modernization of Harohalli low level canal in T .Narasipura Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 42.00 |
| 2 | Modernization of Bidrahallihundi pickup canal and Neerhalla pickup canal in Mysore Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 42.50 |
| 3 | Modernization of Kiggaluve and Meggaluve under Chikkankanhalli Tank in Mysore Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 34.65 |
| 4 | Improvements to Harohalli pickup canal and Bandibachlu branch canal of R .P.Canal in T.Narasipura Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 45.00 |
| 5 | Scheme to lift water from Cauvery river near Bannur town to Augment the atchkat of Harohalli high level and low level Canal in T .Narasipura Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 49.50 |
| 6 | Construction of RCC Trough & other Improvement works in Uddi nala's and Minor's under Rajaparameshwari canal and Harohalli High Level Canal in T . Narasipura taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 45.00 |
| 7 | Modernization of Distributory No 35 under KRBC ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 24.90 |
| 8 | Construction of Weir across Kabini river near Snanghata at Srikanteshswara temple in Nanjanagudu temple ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 15.00 |
| 9 | Remodeling Of DD Urs Canal From Ch: 74.00 Km & Beyond To Accommodate The Additional Discharge Of Chikkanandi Lift Scheme To Fill Tanks In Tail End Reaches ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 103.00 |
| 10 | ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮೈಸೂರು ವಿಭಾಗ, ನಂಜನಗೂಡು ವಿಭಾಗ, ಟಿ.ನರಸೀಪುರ ವಿಭಾಗ ಮತ್ತು ಕೃಷ್ಣರಾಜಸಾಗರ ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ. | 145.86 |
| 11 | Arkavathy River Front Development Project in Kanakapura Town limits under ARP in Kanakapura Taluk of Ramanagara District ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 120.00 |
| 12 | ಅರ್ಕಾವತಿ ಜಲಾಶಯದ ಬಲದಂಡೆ ಏತ ನಾಲೆಯ 1 ನೇ ಕಿ.ಮೀ ನಿಂದ 23 ನೇ ಕಿ.ಮೀ ವರೆಗೆ ನವೀಕರಣ (ಪುನಃಸ್ಥಾಪನೆ) ಕಾಮಗಾರಿಯ ವಿವರವಾದ ಯೋಜನಾ ವರದಿ ಪ್ರಸ್ತಾವನೆಯ ಪರಿಗಣನೆ ಮತ್ತು ಅನುಮೋದನೆ ಬಗ್ಗೆ. | 75.00 |
| 13 | ಅರ್ಕಾವತಿ ಜಲಾಶಯದ ಬಲದಂಡೆ ನಾಲೆಯ 1 ನೇ ಕಿ.ಮೀ ನಿಂದ 22.00 ನೇ ಕಿ.ಮೀ ವರೆಗೆ ನವೀಕರಣ (ಪುನಃಸ್ಥಾಪನೆ) ಕಾಮಗಾರಿಯ ವಿವರವಾದ ಯೋಜನಾ ವರದಿ ಪ್ರಸ್ತಾವನೆಯ ಪರಿಗಣನೆ ಮತ್ತು ಅನುಮೋದನೆ ಬಗ್ಗೆ. | 62.00 |
| 14 | ಅರ್ಕಾವತಿ ಜಲಾಶಯದ ಎಡದಂಡೆ ಏತ ನಾಲೆಯ 1 ನೇ ಕಿ.ಮೀ ನಿಂದ 18 ನೇ ಕಿ.ಮೀ ವರೆಗೆ ಮತ್ತು ಶಾಖಾ ನಾಲೆಯ 1 ನೇ ಕಿ.ಮೀ ನಿಂದ 4 ನೇ ಕಿ.ಮೀ ವರೆಗೆ ನವೀಕರಣ (ಪುನಃಸ್ಥಾಪನೆ) ಕಾಮಗಾರಿಯ ವಿವರವಾದ ಯೋಜನಾ ವರದಿ ಪ್ರಸ್ತಾವನೆಯ ಪರಿಗಣನೆ ಮತ್ತು ಅನುಮೋದನೆ ಬಗ್ಗೆ. | 75.00 |
| 15 | ಅರ್ಕಾವತಿ ಜಲಾಶಯದ ಎಡದಂಡೆ ನಾಲೆಯ 1 ನೇ ಕಿ.ಮೀ ನಿಂದ 23 ನೇ ಕಿ.ಮೀ ವರೆಗೆ ನವೀಕರಣ (ಪುನಃಸ್ಥಾಪನೆ) ಕಾಮಗಾರಿಯ ವಿವರವಾದ ಯೋಜನಾ ವರದಿ ಪ್ರಸ್ತಾವನೆಯ ಪರಿಗಣನೆ ಮತ್ತು ಅನುಮೋದನೆ ಬಗ್ಗೆ. | 65.00 |
| 16 | Tank filling scheme for Magadi, Ramanagara and Kunigal Taluk under Sattegala DWS ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 90.00 |

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ ಕೋಟಿಗಳಲ್ಲಿ |
|---|---|---|
| 17 | Lifting Water from Arkavathi River near Ganalu Village to fill up 46 Tanks in Ramanagara and Kanakapura Taluk of Ramanagara District ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 110.00 |
| 18 | Construction of Bridge across Simsha river from Saraguru to Hosapura in Channapatna taluk under IBP. | 15.00 |
| 19 | ಮಾಗಡಿ ತಾಲ್ಲೂಕು ಬೆಳಗುಂಬ ಪಂಚಾಯಿತಿ ಮಂಚನಬೆಲೆ ಜಲಾಶಯಕ್ಕೆ ಸೇರುವ ಹೊಳೆಗೆ ಅಡ್ಡಲಾಗಿ ಪಣಕನಕಲ್ಲು ಗ್ರಾಮ ಪರಿಮಿತಿಯಲ್ಲಿ ಚೆಕ್ ಡ್ಯಾಮ್ ನಿರ್ಮಾಣ. | 8.00 |
| 20 | Construction of balance works from Ch:200.25 to 229.800 km of Tumkur branch canal under Hemavathy reservoir project. | 160.00 |
| 21 | Scheme to Lift water from Kothagere tank near Kothagere village to fill Baktharahally & other tanks in Kunigal taluk. | 34.00 |
| 22 | ಭೈರನಾಯಕನಹಳ್ಳಿ ಏತ ನೀರಾವರಿ ಯೋಜನೆಯ ಪುನಶ್ಚೇತನ ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಅಮೃತೂರು ಮತ್ತು ಹುಲಿಯೂರುದುರ್ಗ ಹೋಬಳಿಯ ಒಂಬತ್ತು ಕೆರೆಗಳಿಗೆ ಕುಡಿಯುವ ನೀರಿನ ಸಲುವಾಗಿ ಕೆರೆ ತುಂಬಿಸುವ ಕಾಮಗಾರಿಯ ಯೋಜನಾ ವರದಿಯನ್ನು ಪರಿಗಣಿಸುವ ಬಗ್ಗೆ (Kodavathi LIS). | 185.00 |
| 23 | ಹೇಮಾವತಿ ಯೋಜನೆಯಡಿಯಲ್ಲಿನ ನಾಗಮಂಗಲ ಶಾಖಾ ನಾಲೆಯ (NBC) ಸರಪಳಿ ೦.೦೦ ಕಿ.ಮೀ ಯಿಂದ 78.46ಕಿ.ಮೀ ವರೆಗೆ ರೀ-ಮಾಡೆಲಿಂಗ್ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 560.00 |
| 24 | Scheme to lift water from Shimsha river Thaggahalli Anicut to fill MI tanks in Koppa Hobli of Maddur taluk for drinking water purpose ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 33.00 |
| 25 | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಬೆಳ್ಳೂರು ದಾಸನಕೆರೆ ಅಭಿವೃದ್ಧಿ ಕಾಮಗಾರಿ. | 25.00 |
| 26 | Modernisation of Distributaries & Pickups of Kowdle Sub-branch Canal & Keragodu Branch Canal under Nagamangala Constituency. | 260.00 |
| 27 | Modernization of Chamanahalli, Byron & Vaidyanathapura Canals under Maddur Taluk ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 49.50 |
| 28 | ಮಂಡ್ಯ ತಾಲ್ಲೂಕಿನ ಸೂಳೆಕೆರೆ ಕೆರೆ ನಾಲೆಗಳ ಅಭಿವೃದ್ಧಿ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 47.75 |
| 29 | ಮದ್ದೂರು ತಾಲ್ಲೂಕಿನ ಸೂಳೆಕೆರೆಯ ಜೀರ್ಣೋದ್ಧಾರ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 34.00 |
| 30 | ವಿಶ್ವೇಶ್ವರಯ್ಯ ನಾಲಾ ಜಾಲದಡಿಯಲ್ಲಿ ಬರುವ ಹೆಬ್ಬಳ್ಳ ಚೆನ್ನಯ್ಯ ನಾಲೆಯಡಿಯಲ್ಲಿ ಬರುವ ವಿತರಣಾ ನಾಲೆ ಮತ್ತು ಪಿಕಪ್ ನಾಲೆಗಳ ಅಭಿವೃದ್ಧಿ ಕಾಮಗಾರಿ. | 189.66 |
| 31 | Modernisation of Distributaries & Pickups of Keragodu Branch Canal, New Maddur Branch Canal & Lokasara Branch Canal under Maddur Constituency | 300.00 |
| 32 | ವಿಶ್ವೇಶ್ವರಯ್ಯ ನಾಲಾ ಜಾಲದಡಿಯಲ್ಲಿ ಬರುವ ಹೆಬ್ಬಕವಾಡಿ ಶಾಖಾ ನಾಲೆ ಹಾಗೂ ನಿಡಘಟ್ಟ ಶಾಖಾ ನಾಲೆಯ ಅಭಿವೃದ್ಧಿ ಕಾಮಗಾರಿಯ ೨ನೆಯ ಹಂತದ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 293.47 |
| 33 | Modernisation of Kirugavalu & Marakalu Tank Canals under TBC. | 32.30 |
| 34 | ಟಿ ನರಸೀಪುರ ಮತ್ತು ಮಳವಳ್ಳಿ ತಾಲ್ಲೂಕಿನಲ್ಲಿ ಬರುವ ತುರುಗನೂರು ಶಾಖಾ ವಿಸ್ತರಣಾ ನಾಲೆ, ಉಕ್ಕಲಗೆರೆ ಶಾಖಾ ನಾಲೆ ಮತ್ತು ಇದರಡಿಯಲ್ಲಿ ಬರುವ ವಿತರಣಾ ನಾಲೆಗಳು ಮತ್ತು ತುರುಗನೂರು ಶಾಖಾ ನಾಲೆಯ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿ. | 91.32 |
| 35 | Lifting Water From Shimsha River Near Maragowdanahalli, Halagur Hobli To Fill Up Halagur Tank In Malavalli Taluk of Mandya District. | 9.85 |
| 36 | Modernisation of Distributaries & Pickups of Shimsha Branch Canal, Kowdle Sub-branch Canal, Keragodu Branch Canal, New Maddur Branch Canal & Lokasara Branch Canal under Mandya Constituency. | 630.00 |
| 37 | Improvements to Distributary -2 and Its Sub Distributaries and Minors of Link Canal coming under Vishveshwaraya canal in Srirangapatana Taluk , Mandya District ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 45.00 |
| 38 | Improvements to Vishveswaraya canal network under KRS project Phase II - in Mandya district, Karnataka [RBLL BRANCHES PACKAGE-II]. | 16.00 |

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ ಕೋಟಿಗಳಲ್ಲಿ |
|---|---|---|
| 39 | Modernisation of Distributaries,Minors, Pickups & Left bank low level canal of Vishveshwaraya Canal Network Phase –II. | 113.00 |
| 40 | Scheme to Lift Water from Hemavathy River near Goode Hosahally village to fill tanks in KR Pete, Nagamangala & Channarayapatna Taluk Phase-2 ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 67.00 |
| 41 | Providing C. C. Lining & Re-Construction Of Structure To Distributory-64 And Its Minors Under Hemavathy Left Bank Canal. ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 65.00 |
| 42 | ಹೊಸಹೊಳಲು ಎಡ ಮೇಲ್ಮಟ್ಟದ ನಾಲೆ ಸರಪಳಿ 11.00 ಕಿ.ಮೀ ನಿಂದ 16.00 ಕಿ.ಮೀ ವರೆಗೆ ಉಳಿಕೆ ಕಾಮಗಾಗಿ ಹಾಗು ಆಧುನೀಕರಣ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 21.50 |
| 43 | Remodelling Of Dy-56, 56a, 57 (Lbc & Rbc), 59 & 59a In Hemavathy Left Bank Canal Under Hemavathy Reservoir Project ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 22.00 |
| 44 | ವಿಶ್ವೇಶ್ವರಯ್ಯ ನಾಲಾ ಜಾಲದಡಿಯಲ್ಲಿ ಬರುವ ತುರುಗನೂರು ಶಾಖಾ ನಾಲೆಯಡಿಯಲ್ಲಿ ಬರುವ ಪಿಕಪ್ ನಾಲೆಗಳ ಅಭಿವೃದ್ಧಿ ಕಾಮಗಾರಿ. | 45.00 |
| 45 | Replacement of existing 1300 HP VT Pumps, Providing trash rack to Head regulator, EoT cranes for the maintenance of gate valves and NRVs, servicing and hauling of air chamber, surge protection, CC Thrust block to 1500 mm dia PSC pipe lines joint & construction of Protective valve and check dam across the intake seepage valley of Nanjapura LIS. | 20.00 |
| 46 | ಕೃಷ್ಣರಾಜನಗರ ಶಾಖಾ ನಾಲೆಗೆ ಸಿಮೆಂಟ್ ಕಾಂಕ್ರೀಟ್ ಲೈನಿಂಗ್ ಮಾಡುವ ಆಧುನೀಕರಣ ಕಾಮಗಾರಿಯ ಅಂದಾಜು ಪ್ರಸ್ತಾವನೆ. | 108.00 |
| 47 | Providing c .c. lining to chamalapura branch , kaggere branch & bannikuppe branch canal of ramasamudra canal ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 43.00 |
| 48 | ಚಾಮರಾಜ ಬಲದಂಡೆ ನಾಲೆಯ 14ನೆಯ ಕಿ.ಮೀ ನಲ್ಲಿ ಇರುವ ಅಕ್ವಡೆಕ್ಟ್ ಪುನರ್ ನಿರ್ಮಾಣ ಕಾಮಗಾರಿ ಅಂದಾಜು ಪ್ರಸ್ತಾವನೆ. | 10.00 |
| 49 | Modernization Of Kattemalavadi Canal And Vadakekatte High Level Canal , Improvements To C.D Works ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 49.85 |
| 50 | Modernization Of Marur Branch Canal And Its Distributaries Under Hrbc ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 90.00 |
| 51 | Re-Modelling and Improvements To Dy No .1 to 18 of Harangi Left Bank Canal Under Harangi Reservoir Project ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 49.90 |
| 52 | Construction Of Bow- String Arch Bridge At The Downstream Of Harangi Reservoir ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 36.50 |
| 53 | ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಗಾಂಧಿಗ್ರಾಮದ ಬಳಿ ಕಬಿನಿ ನದಿಯಿಂದ ಏತ ನೀರಾವರಿ ಯೋಜನೆಯ ಮೂಲಕ ಕುಡಿಯುವ ನೀರಿನ ಸಲುವಾಗಿ ಗುಂಡ್ಲುಪೇಟೆ ತಾಲ್ಲೂಕಿನ ಕೆರೆ-ಕಟ್ಟೆಗಳಿಗೆ ನೀರು ತುಂಬಿಸುವ ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 475.00 |
| 54 | Treatment to upstream face of Kabini Dam. | 32.25 |
| 55 | Upgradation of electro-mechanical equipments and other allied works in Honnavalli DWSS under Tumkur Branch Canal ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 15.25 |
| 56 | Scheme to lift water from Nagamangala branch canal under HLBC near Muddanahally to fill D.Tumkur & other 18 tanks in Hirisave hobli of Channarayapatna taluk for drinking water purpose. | 74.00 |
| 57 | Scheme to lift water from Tumkur branch canal @Ch:6.10km under Hemavathy project to fill Kenkere and other 20 tanks in Arasikere taluk for drinking water purpose. | 32.00 |
| 58 | ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಅಲ್ಲಾಪಟ್ಟಣ ಏತ ನೀರಾವರಿ ಯೋಜನೆಯ ಪುನಶ್ಚೇತನ ಕಾಮಗಾರಿ ಅಂದಾಜು ಪ್ರಸ್ತಾವನೆ. | 11.50 |
| 59 | Restoration Of The Scheme To Lift Water From Bn Boranna Gowda Canal At Ch : 46.25 Km (Hallimysore Lis) ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 47.00 |

| ಕ್ರ. ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ ಕೋಟಿಗಳಲ್ಲಿ |
|---|---|---|
| 60 | ಸೋಮವಾರಪೇಟೆ ತಾಲ್ಲೂಕಿನ ಕಟ್ಟೇಪುರ ಗ್ರಾಮದ ಬಳಿ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಮತ್ತು ಕೋಣನೂರು ಹೋಬಳಿಯ ಗ್ರಾಮಗಳ ೫೩ ಕೆರೆಗಳು ಹಾಗೂ ೩೦ ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆಯ ಮುಖ್ಯ ವಿತರಣಾ ತೊಟ್ಟಿಯಿಂದ ಬಲಭಾಗ ಮತ್ತು ಮಧ್ಯಭಾಗಕ್ಕೆ ಗ್ರಾವಿಟಿ ಪೈಪ್ ಲೈನ್ ಅಳವಡಿಸುವ ಕಾಮಗಾರಿ. | 77.00 |
| 61 | ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ ೨ ನೇ ಹಂತದಲ್ಲಿ ಬರುವ ಬಿ.ಜಿ ಮಾರನಹಳ್ಳಿ ಶಾಖಾ ನಾಲೆ ಸರಪಳಿ ೦.೦೦ ಕಿ.ಮೀ ನಿಂದ ೮.೭೦೦ ಕಿ.ಮೀ ವರೆಗಿನ ಆಯ್ದ ಭಾಗಗಳಲ್ಲಿ ನಾಲಾ ಅಭಿವೃದ್ಧಿ ಕಾಮಗಾರಿಯ ಅಂದಾಜು ಪ್ರಸ್ತಾವನೆ. | 11.25 |
| 62 | The Scheme To Lift Water From Hemavathy River Near Kumbenahalli Village To Fill Agriculture University Tank And Other 30 Tanks In Hassan District For Drinking Purpose ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 47.00 |
| 63 | ಗೂಳೂರು-ಹೆಬ್ಬೂರು ಕುಡಿಯುವ ನೀರಿನ ಯೋಜನೆಯ ಹಂತ-೧ರ ಪಂಪ್‌ಹೌಸ್‌ನ ಪಂಪು ಮೋಟಾರು & ಇತರ ಎಲೆಕ್ಟ್ರಿಕಲ್ ಸಾಮಗ್ರಿಗಳನ್ನು ಬದಲಾವಣೆ ಮಾಡುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ಅನುಮೋದಿಸಲು ಪರಿಗಣಿಸುವ ಬಗ್ಗೆ. | 9.90 |
| 64 | Improvements Works To Turuvekere Tank In Turuvekere Taluk In Tumkur District ಕಾಮಗಾರಿಯ ಅಂದಾಜು ಪ್ರಸ್ತಾವನೆ ಕುರಿತು. | 22.00 |
| 65 | Re-Construction of aqueduct in LBC and providing cement concrete box drains in LBC and protective work to sluices of LBC in Nonavinakere tank. | 9.00 |
| 66 | ಹಾರಂಗಿ ಜಲಾಶಯ ಯೋಜನೆಡಿಯಲ್ಲಿ ಬರುವ ಪಿರಿಯಾಪಟ್ಟಣ ಏತ ನೀರಾವರಿ ಕಾಲುವೆಯ ಸರಪಳಿ: ೦.೦೦೦ ಕಿ.ಮೀ ನಿಂದ ಸರಪಳಿ: ೫೨.೨೦೦ ಕಿ.ಮೀ. ವರೆಗಿನ ರೀ-ಮಾಡಲಿಂಗ್ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಅನುಮೋದನೆ ನೀಡುವ ಕುರಿತು | 198.00 |
| **66** | | **5965.16** |

## ಅನುಬಂಧ-8

## ವಿಶ್ವೇಶ್ವರಯ್ಯ ಜಲ ನಿಗಮ

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುಧಾಮ್ ದಾಸ್, ಶ್ರೀ ಮಧು ಜಿ ಮಾದೇಗೌಡ ಇವರುಗಳ ನಿಯಮ-72ರಲ್ಲಿ ನೀಡಿರುವ ಗಮನ ಸಳೆಯು ಸೂಚನೆಗೆ ಉತ್ತರ

**ನಿಗಮದಡಿಯಲ್ಲಿ ಈಗಾಗಲೇ ಅನುಮೋದನೆಗೊಂಡು ಪ್ರಗತಿಯಲ್ಲಿರುವ ಯೋಜನೆಗಳ ವಿವರಗಳು ಕೆಳಗಿನಂತಿವೆ:**

**1. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ:**ಎತ್ತಿನಹೊಳೆ ಯೋಜನೆಯು ಸಮಗ್ರ ಕುಡಿಯುವ ನೀರಿನ ಯೋಜನೆಯಾಗಿದ್ದು, ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ, ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳದಿಂದ ಮುಂಗಾರು ಮಳೆ ಅವಧಿಯಲ್ಲಿ 24.01 ಟಿ.ಎಂ.ಸಿ ಪ್ರಮಾಣದ ಪ್ರವಾಹದ ನೀರನ್ನು 07 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರಿನ ಬರಪೀಡಿತ 29 ತಾಲ್ಲೂಕಿನ 38 ಪಟ್ಟಣ ಪ್ರದೇಶದ ಹಾಗೂ 6657 ಗ್ರಾಮಗಳ ಸುಮಾರು 75.59 ಲಕ್ಷ(Projected population for 2023-24)ಜನರಿಗೆ ಮತ್ತು ಜಾನುವಾರುಗಳಿಗೆ 14.056 ಟಿ.ಎಂ.ಸಿ ಕುಡಿಯುವ ನೀರನ್ನು ಒದಗಿಸುವುದು. ಜೊತೆಗೆ 05 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ ಹಾಗೂ ತುಮಕೂರು ವ್ಯಾಪ್ತಿಯಲ್ಲಿ 527 ಕೆರೆಗಳಿಗೆ 9.953 ಟಿ.ಎಂ.ಸಿ ಪ್ರಮಾಣದ ನೀರನ್ನು ಕೆರೆಗಳ ಸಾಮರ್ಥ್ಯದ ಶೇ. 50% ರಷ್ಟು ತುಂಬಿಸಿ ಅಂತರ್ಜಲ ಮರುಪೂರಣ ಮಾಡುವುದು ಸದರಿ ಯೋಜನೆಯ ಉದ್ದೇಶವಾಗಿರುತ್ತದೆ.

ಸದರಿ ಯೋಜನೆಯ ರೂ.23,251.66 ಕೋಟಿ ಮೊತ್ತದ ಪುನರ್ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದ ಆದೇಶ ಸಂ:ಜಸಂಇ 61 ವಿಬ್ಯಾಇ 2022 ದಿನಾಂಕ:10.01.2023 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಹಂತ-1ರ ಏತ(lift component)ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು (ವಿಯರ್-3ರ ವಿದ್ಯುತ್ ಕಾಮಗಾರಿಗಳನ್ನು ಹೊರತುಪಡಿಸಿ)ಪೂರ್ಣಗೊಳಿಸಿ ದಿನಾಂಕ:06.09.2024 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪಮುಖ್ಯಮಂತ್ರಿಗಳು ಲೋಕಾರ್ಪಣೆ ಮಾಡಿದ್ದು, ಗುರುತ್ವ ಕಾಲುವೆಯ ಸರಪಳಿ:32.50ಕಿ.ಮೀ ನಲ್ಲಿರುವ Escape ನಿಂದ ವೇದಾ ವ್ಯಾಲಿ ಮುಖಾಂತರ ವಾಣಿವಿಲಾಸ ಸಾಗರ ಅಣೆಕಟ್ಟೆಗೆ ನೀರನ್ನು ತಾತ್ಕಾಲಿಕವಾಗಿ ಹರಿಸಲಾಗಿರುತ್ತದೆ.

ಯೋಜನೆಯ ಹಂತ-2ರಡಿ ಕೈಗೆತ್ತಿಕೊಳ್ಳಲಾಗಿರುವ ಸ:0.00 ಕಿ.ಮೀ ರಿಂದ ಸ:261.69 ಕಿ.ಮೀ ವರೆಗಿನ 252.61 ಕಿ.ಮೀ ಉದ್ದದ ಗುರುತ್ವ ಕಾಲುವೆಯ ನಿರ್ಮಾಣದ ಪೈಕಿ 174.78 ಕಿ.ಮೀ ಪೂರ್ಣಗೊಂಡಿದ್ದು, 51.35 ಕಿ.ಮೀ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಗುರುತ್ವ ಕಾಲುವೆಯ ಸ:0.00 ಕಿ.ಮೀ ರಿಂದ ಸ:32.50 ಕಿ.ಮೀ ವರೆಗಿನ ಕಾಮಗಾರಿಗಳು ಯಾವುದೇ ಅಡೆತಡೆಯಿಲ್ಲದೆ ಪೂರ್ಣಗೊಂಡಿದ್ದು, ಗುರುತ್ವ ಮುಖ್ಯ ಕಾಲುವೆಯ ಸ:32.72 ಕಿ.ಮೀ ರಿಂದ ಸ:229.46 ಕಿ.ಮೀ ರವರೆಗೆ 20 ಸ್ಥಳಗಳಲ್ಲಿ 19.41 ಕಿ.ಮೀ ಉದ್ದದ ನಾಲೆಯು ಹಾಸನ (15.47 ಕಿ.ಮೀ) ಮತ್ತು ತುಮಕೂರು (3.944 ಕಿ.ಮೀ) ಜಿಲ್ಲೆಗಳಲ್ಲಿ ಒಟ್ಟು 508ಎ – 01ಗು (ಹಾಸನ:422 ಎ –35ಗು ಹಾಗೂ ತುಮಕೂರು: 85ಎ–6ಗು) ಅರಣ್ಯ ಪ್ರದೇಶಗಳಲ್ಲಿ ಹಾದು ಹೋಗುತ್ತಿದ್ದು, ಸದರಿ ಪ್ರದೇಶಕ್ಕೆ ಅರಣ್ಯ ಇಲಾಖೆಯಿಂದ ಏಕೀಕೃತ ಅರಣ್ಯ ತೀರುವಳಿ ಪ್ರಸ್ತಾವನೆಗೆ ಅನುಮೋದನೆ ಪಡೆದು ಆಗಸ್ಟ್–2025ರ ಅಂತ್ಯಕ್ಕೆ ಸದರಿ ಯೋಜನೆಯ ಎಲ್ಲಾ 8 ವಿಯರ್‌ಗಳಿಂದ ಲಭ್ಯವಾಗಲಿರುವ 24.01 ಟಿ.ಎಂ.ಸಿ ನೀರನ್ನು ಮೇಲೆತ್ತಿ ಗುರುತ್ವ ಕಾಲುವೆ 231.00 ಕಿ.ಮೀ (ತುಮಕೂರು) ವರೆಗೆ ನಾಲೆಗೆ ನೀರು ಹರಿಸಲು ಯೋಜಿಸಲಾಗಿದೆ.

ಸಮತೋಲನಾ ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಮಧುಗಿರಿ–ಪಾವಗಡ ಫೀಡರ್, ಟಿ.ಜಿ.ಹಳ್ಳಿ – ರಾಮನಗರ ಫೀಡರ್ ಹಾಗೂ ಗೌರಿಬಿದನೂರು ಫೀಡರ್ ಪೈಪ್‌ಲೈನ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಒಟ್ಟು 256.81 ಕಿ.ಮೀ ನಲ್ಲಿ 231.73 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

ಪುನರ್ ಪರಿಷ್ಕೃತ ಯೋಜನಾ ವರದಿಯನ್ವಯ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ನಂತರ ನೀರನ್ನು ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಪೂರೈಸಲುಗುರುತ್ವಾ ಕಾಲುವೆಯ ಕೊನೆಯ ಭಾಗದಿಂದ ಡಿ.ಸಿ–5 ವರೆಗೆ ನೀರನ್ನು ಎತ್ತುವ ಲಿಫ್ಟ್ ಹಾಗೂ36.96 ಕಿ.ಮೀ ಉದ್ದದ ಗುರುತ್ವ ಪೈಪ್‌ಲೈನ್,ಕೋಲಾರ ಹಾಗೂ ಶ್ರೀನಿವಾಸಪುರ ಫೀಡರ್ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಪ್ರಸ್ತುತ, ನಾಲಾ ಪಂಕ್ತೀಕರಣವು ಅನುಮೋದನೆಗೊಂಡಿದ್ದು, ಅದರನ್ವಯ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿರುತ್ತವೆ.

ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಕೋಲಾರ ಮತ್ತು ಶ್ರೀನಿವಾಸಪುರ ಫೀಡರ್ ಪೈಪ್‌ಲೈನ್ ಕಾಮಗಾರಿಗಳನ್ನು 2025–26ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.ಮಾರ್ಚ್–2027 ರ ಅಂತ್ಯಕ್ಕೆ ಅನುದಾನದ ಲಭ್ಯತೆ ಮೇರೆಗೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ 2024–25ನೇ ಸಾಲಿನಲ್ಲಿ ರೂ.1296.00 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿದ್ದು, ಯೋಜನೆಗಾಗಿ ಫೆಬ್ರವರಿ–2025ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.16,673.51 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

**2. ಭದ್ರಾ ಮೇಲ್ದಂಡೆ ಯೋಜನೆ:**ಭದ್ರಾ ಮೇಲ್ದಂಡೆ ಯೋಜನೆಯು ತುಂಗಾ ನದಿಯಿಂದ 17.40ಟಿಎಂಸಿ ನೀರನ್ನೆತ್ತಿ ಭದ್ರಾಜಲಾಶಯಕ್ಕೆ ಹರಿಸುವುದು ಹಾಗೂ ಮತ್ತು ಭದ್ರಾ ಜಲಾಶಯದಿಂದ 29.90 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಹನಿ ನೀರಾವರಿ ಪದ್ಧತಿ ಮೂಲಕ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಲ್ಲಿ ಬರುವ 2,25,515 ಹೆಕ್ಟೇರ್(5.57 ಲಕ್ಷಎಕರೆ) ಕ್ಷೇತ್ರಕ್ಕೆ ಹನಿ ನೀರಾವರಿ ಮಾಡುವುದರೊಂದಿಗೆ ಒಟ್ಟು 367 ಕೆರೆಗಳನ್ನು ಅವುಗಳ ಸಾಮರ್ಥ್ಯದ 50% ರಷ್ಟು ತುಂಬಿಸಲು ಯೋಜಿಸಲಾಗಿರುತ್ತದೆ.

ಭದ್ರಾ ಮೇಲ್ದಂಡೆ ಯೋಜನೆಯ ರೂ.21473.67 ಕೋಟಿಗಳ ಮೊತ್ತದ ಸಮಗ್ರ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರವು ಆದೇಶ ಸಂಖ್ಯೆ: WRD 166 VIBYAE 2020 Bangalore dated: 16.12.2020ರಲ್ಲಿಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಭದ್ರಾ ಮೇಲ್ದಂಡೆ ಯೋಜನೆಯ ಭಾಗವಾದ ತರೀಕೆರೆ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಎರಡು ಪ್ಯಾಕೇಜುಗಳಲ್ಲಿ ಟರ್ನ್ ಕೀ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ. ಯೋಜನೆಯಡಿಯ 20150ಹೆ. ಪೈಕಿ ಈಗಾಗಲೇ ಸುಮಾರು 12000ಹೆ.ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. ಮುಂದುವರೆದು 2019ರಿಂದ ವಾಣಿ ವಿಲಾಸ ಸಾಗರ ಜಲಾಶಯಕ್ಕೆ ಮುಂಗಾರು ಹಂಗಾಮಿನಲ್ಲಿ ನೀರನ್ನು ಹರಿಸಲಾಗುತ್ತಿದೆ.

ಚಿತ್ರದುರ್ಗ ಶಾಖಾ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆಗಳ ಕಾಮಗಾರಿಗಳನ್ನು ವಿವಿಧ ಪ್ಯಾಕೇಜುಗಳಾಗಿ ವಿಂಗಡಿಸಿ ಕೈಗೊಂಡಿದ್ದು ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ತುಮಕೂರು ಶಾಖಾ ಕಾಲುವೆ ಮತ್ತು ಚಿತ್ರದುರ್ಗ ಶಾಖಾ ಕಾಲುವೆ ಅಡಿ ಹನಿ ನೀರಾವರಿ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಭದ್ರಾ ಮೇಲ್ದಂಡೆ ಯೋಜನೆಗೆ 2024-25ನೇ ಸಾಲಿನಲ್ಲಿ ರೂ.1430.00 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿದ್ದು, ಯೋಜನೆಗಾಗಿ ಫೆಬ್ರವರಿ-2025ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.10,188.46 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಸದರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ರೂಪಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.

- ದಿನಾಂಕ: 24.12.2020 ರಂದು ನಡೆದ ಕೇಂದ್ರ ಜಲಶಕ್ತಿ ಮಂತ್ರಾಲಯದ ಸಲಹಾ ಸಮಿತಿಯ (Advisory Committee)147 ನೇ ಸಭೆಯಲ್ಲಿ ಯೋಜನೆಯ Techno-economicviability ಗೆ ಒಪ್ಪಿಗೆ ನೀಡಿರುತ್ತದೆ.
- ದಿನಾಂಕ: 25.03.2021 ರಂದು ನಡೆದInvestment Clearance Committeeಯ 15 ನೇ ಸಭೆಯಲ್ಲಿ ಯೋಜನೆಯ ಡ್ರಿಪ್ ಲ್ಯಾಟರಲ್ ಗಳನ್ನು ಹೊರತು ಪಡಿಸಿದಂತಹ ಮೊತ್ತ ರೂ.16,125.48 ಕೋಟಿಗಳಿಗೆ ಒಪ್ಪಿಗೆ ನೀಡಿರುತ್ತದೆ.
- ದಿನಾಂಕ: 15.02.2022 ರಂದು ನಡೆದHigh Powered Steering Committee(HPSC)ಯ 15 ನೇ ಸಭೆಯಲ್ಲಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಗೆ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.
- ದಿನಾಂಕ: 12.10.2022 ರಂದು ನಡೆದPublic Investment Board (PIB)ಸಭೆಯಲ್ಲಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಣೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.

ಈತನ್ಮಧ್ಯೆ ಈ ಯೋಜನೆಗೆ 2023-24ರ ಕೇಂದ್ರ ಬಜೆಟ್ ನಲ್ಲಿ ರೂ.5300.00ಕೋಟಿ ಸಹಾಯ ಧನ ಘೋಷಣೆಯಾಗಿರುತ್ತದೆ.ಕೇಂದ್ರದ ಸಹಾಯಧನ ಪಡೆಯುವ ನಿಟ್ಟಿನಲ್ಲಿ ದಿನಾಂಕ:25.02.2025 ರಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರೊಂದಿಗೆ ಕೇಂದ್ರದ ಜಲಶಕ್ತಿ ಮಂತ್ರಾಲಯದ ಸಚಿವರೊಂದಿಗೆ ಹಾಗೂ ಜಲಶಕ್ತಿ ಮಂತ್ರಾಲಯದ ಕಾರ್ಯದರ್ಶಿಗಳು ಮತ್ತು ಇನ್ನಿತರೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ಕೇಂದ್ರದ ಸಹಾಯಧನ ಪಡೆಯುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಜರುಗಿಸಲಾಗುತ್ತಿದೆ.

3. **<u>ಕಡೂರು ಕೆರೆ ತುಂಬಿಸುವ ಯೋಜನೆ;</u>**ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಮತ್ತು ಕಡೂರು ಹಾಗೂ ಹಾಸನ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನ ಒಟ್ಟಾರೆ 197 ಕೆರೆಗಳಿಗೆ ಭದ್ರಾ ಉಪಜಲಾನಯನ ಪ್ರದೇಶದಿಂದ 1.45ಟಿಎಂಸಿ ಪ್ರಮಾಣದ ನೀರಿನ ಹಂಚಿಕೆಯೊಂದಿಗೆ ಏತ ನೀರಾವರಿ ಮೂಲಕ ನೀರನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಈ ಯೋಜನೆಯಡಿ ಬರುವ ಮೊದಲನೇ ಹಾಗೂ ಎರಡನೇ ಹಂತದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಸದರಿ ಯೋಜನೆಯ ರೂ.1281.80 ಕೋಟಿಗಳ ಮೊತ್ತದ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಸರ್ಕಾರವು ಆದೇಶ ಸಂಖ್ಯೆ: WRD 81 VIBYE 2019 Bangalore dated: 24.11.2020ರಲ್ಲಿಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಪ್ರಸ್ತುತ ಮೊದಲ ಮತ್ತು ಎರಡನೇ ಹಂತದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮೂರನೇ ಹಂತದ ಕಾಮಗಾರಿಯ ಅಂದಾಜು ಪಟ್ಟಿಯನ್ನು 2023-24 ನೇ ಸಾಲಿನ ದರಪಟ್ಟಿಯನ್ವಯ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 50ನೇ ಸಭೆಯಲ್ಲಿ ಮಂಡಿಸಿ; ನಿಗಮದ ನಿರ್ದೇಶಕರ ಮಂಡಳಿಯ 32ನೇ ಸಭೆಗೆ ಮಂಡಿಸಲಾಗಿದ್ದು, ಅನುಮೋದನೆ ನೀರಿಕ್ಷಿಸಲಾಗಿರುತ್ತದೆ.ಅನುಮೋದನೆಯ ಬಳಿಕ ನಿಯಮಾನುಸಾರ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.

ಕಡೂರು ಕೆರೆ ತುಂಬಿಸುವಯೋಜನೆಗೆ 2024-25ನೇ ಸಾಲಿನಲ್ಲಿ ರೂ.60.00 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿದ್ದು, ಯೋಜನೆಗಾಗಿ ಫೆಬ್ರವರಿ-2025ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.258.62 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

**ಇದರೊಂದಿಗೆ ನಿಗಮದ ವತಿಯಿಂದ ವಾಣಿವಿಲಾಸ ಸಾಗರ ಹಾಗೂ ಗಾಯತ್ರಿ ಜಲಾಶಯಗಳ ನಿರ್ವಹಣೆಯನ್ನೂ ಸಹ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.**

1) **ವಾಣಿ ವಿಲಾಸ ಸಾಗರ ಜಲಾಶಯ:-** ವಿ.ವಿ.ಸಾಗರ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯವು 30.422 ಟಿ.ಎಂ.ಸಿ(Gross Storage)ಗಳಾಗಿದ್ದು, ಸದರಿ ಜಲಾಶಯದಿಂದ ಒಟ್ಟು 12135 ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

2) **ಗಾಯತ್ರಿ ಜಲಾಶಯ:-** ಸದರಿ ಜಲಾಶಯದ ನೀರಿನ ಸಂಗ್ರಹಣೆಯು 0.975 ಟಿ.ಎಂ.ಸಿ (Gross Storage)ಗಳಾಗಿದ್ದು, ಸದರಿ ಜಲಾಶಯದಿಂದ ಒಟ್ಟು 2305 ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

**ನಿಗಮದಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ:**

1) **ವಿ.ವಿ ಸಾಗರ ಕಾಲುವೆಗಳ ಆಧುನೀಕರಣ (ಅದರಡಿಯಲ್ಲಿ ಬರುವ ಕಟ್ಟಡಗಳು) ಹಾಗೂ ಹನಿ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ADB (Asian Developement Bank) ವತಿಯಿಂದ ಅಭಿವೃದ್ಧಿಪಡಿಸುವುದು:**

ವಾಣಿ ವಿಲಾಸ ಸಾಗರ ಯೋಜನೆಯ ಕಾಲುವೆಗಳನ್ನು ನಿರ್ಮಾಣ ಮಾಡಿ ಸುಮಾರು 115 ವರ್ಷಗಳು ಕಳೆದಿದ್ದು, ಪ್ರಸ್ತುತ ಕಾಲುವೆಗಳ ಆಧುನೀಕರಣಗೊಳಿಸುವ ಮತ್ತು ಹನಿ ನೀರಾವರಿ ಪದ್ಧತಿಯನ್ನು ಜಾರಿಗೊಳಿಸುವ ವಿವರವಾದ ವಿಸ್ತೃತ ಯೋಜನಾ ವರದಿ (DPR) ತಯಾರಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಇದರಲ್ಲಿ ಕಾಲುವೆಗಳಿಗೆ ಸಿ.ಸಿ ಲೈನಿಂಗ್ ಹಾಕುವುದು, ಸಂಪೂರ್ಣ ಶಿಥಿಲಗೊಂಡ ಅಡ್ಡಮೋರಿ ಕಟ್ಟಡಗಳನ್ನು ತೆರವುಗೊಳಿಸಿ ಹೊಸದಾಗಿ ನಿರ್ಮಿಸುವುದು, ದುರಸ್ತಿಗೊಳಪಡಬಹುದಾದ ಸಿ.ಡಿ ಕಾಮಗಾರಿಗಳು, Aqueduct ಗಳನ್ನು ಭದ್ರತೆಗೊಳಿಸುವುದು. ಹಿರಿಯೂರು ಪಟ್ಟಣದಲ್ಲಿ Closed conduit ಕಾಲುವೆಗಳನ್ನು ನಿರ್ಮಿಸುವುದು ಹಾಗೂ ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಯನ್ನು ADB ವತಿಯಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಗೆ ಡಿ.ಪಿ.ಆರ್. ತಯಾರಿಸಿದ್ದು ಅನುಮೋದನೆ ಕೋರಿ ಕೇಂದ್ರ ಜಲ ಆಯೋಗ (CWC) ರವರಿಗೆ ರೂ.1662.93 ಕೋಟಿ ಮೊತ್ತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಜರುಗಿಸಲಾಗುತ್ತಿದೆ.

2) **ವಿ.ವಿ ಸಾಗರ ಅಣೆಕಟ್ಟಿನ ಪುನಃಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿ:**

ವಾಣಿ ವಿಲಾಸ ಸಾಗರ ಜಲಾಶಯದ ರೂ.120.00 ಕೋಟಿಗಳ ಮೊತ್ತದ PST ಯನ್ನು ಅನುಮೋದನೆಗಾಗಿ SPMU-DRIP ಕಛೇರಿಯಿಂದ Project Director (DRIP), CWC ರವರಿಗೆ ದಿನಾಂಕ:15.05.2024 ರಲ್ಲಿ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ರೂ.4.74 ಕೋಟಿಗಳ ಮೊತ್ತದ Part-A ನಲ್ಲಿರುವ Itemಗಳಿಗೆ NOL ಕೋರಿ CPMUಕಛೇರಿಯಿಂದ World Bank ಕಛೇರಿಗೆ ಪ್ರಸ್ತಾವನೆ ಸಲ್ಲಿಸುತ್ತಾ, ರೂ.96.93 ಕೋಟಿಗಳ ಮೊತ್ತದ Part-B ನಲ್ಲಿರುವ ಕೆಲವು ಅಂಶಗಳಿಗೆ ಪಾಲನಾ ವರದಿ ಸಲ್ಲಿಸುವಂತೆ CPMU, CWC ರವರು ಸೂಚಿಸಿರುತ್ತಾರೆ.ಅದರನ್ವಯ, ಸದರಿ PSTಗೆ CPMU, CWC ರವರು ಸೂಚಿಸಿರುವ ಅಂಶಗಳಿಗೆ ಪಾಲನಾ ವರದಿಯನ್ನು ಕೂಡಲೇ ಸಲ್ಲಿಸಿ ತ್ವರಿತವಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಅಗತ್ಯ ಕ್ರಮವನ್ನು ವಹಿಸಲಾಗುತ್ತಿದೆ.